ಕರ್ನಾಟಕ ಸರ್ಕಾರ

ಸಂಖ್ಯೆ: ಕೈತಉ/ತ/ಸಂ–2/ವಿವ–53/2020–21

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
ಆಯುಕ್ತಾಲಯ
"ಕೌಶಲ್ಯ ಭವನ", ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು–29.
ದಿನಾಂಕ: 21 /08/2020

## ನೋಟೀಸು

ವಿಷಯ:– ಸ್ಥಳಾಂತರಗೊಂಡಿರುವ ಖಾಸಗಿ ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಹೊಸ ಸ್ಥಳದಲ್ಲಿ ಡಿ.ಜಿ.ಟಿ. ನವದೆಹಲಿ ರವರಿಂದ ಎನ್.ಸಿ.ವಿ.ಟಿ. ಗೆ ಮರುಸಂಯೋಜನೆ ಪಡೆಯದೆ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ.

ಉಲ್ಲೇಖ:– (1) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಉತಇ/ತ/ಸಂ–2/ವಿವ–18/2015–16, ದಿನಾಂಕ: 07/06/2018.

(2) ಡಿ.ಜಿ.ಟಿ., ನವದೆಹಲಿ ರವರ ಪತ್ರ ಸಂಖ್ಯೆ: DGET-19(1)/2007-CD Dated: 05/07/2007.

(3) ಡಿ.ಜಿ.ಟಿ., ನವದೆಹಲಿ ರವರ ಪತ್ರ ಸಂಖ್ಯೆ: DGT-MoM/11/2019-O/o Dir (TC), Dated: 18/09/2019.

(4) ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ ರವರ ಇ–ಮೇಲ್ ದಿನಾಂಕ: 15/08/2020.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ಸ್ಥಳಾಂತರಗೊಂಡಿರುವ ಅನುದಾನರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಸಂಯೋಜನೆ ಹೊಂದಲು ಡಿ.ಜಿ.ಟಿ. ನವದೆಹಲಿ ರವರ ಆನ್‌ಲೈನ್ ವೆಬ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿ ಕಡ್ಡಾಯವಾಗಿ ಮರು ಸಂಯೋಜನೆ ಹೊಂದುವುದು ಸಂಸ್ಥೆಯ ಆಡಳಿತ ಮಂಡಳಿಯವರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ ಎಂದು ಹಾಗೂ ಒಂದು ವೇಳೆ ಸಂಯೋಜನೆ ಹೊಂದದಿದ್ದಲ್ಲಿ ಪ್ರವೇಶಗೊಂಡಿರುವ ತರಬೇತಿದಾರರ ಪಟ್ಟಿ ರದ್ದಾಗಿದೆ ಎಂದು ಪರಿಗಣಿಸಲಾಗುವುದು ಎಂದು ತಿಳಿಸಲಾಗಿರುತ್ತದೆ. ಉಲ್ಲೇಖ (2) & (3)ರ ಡಿ.ಜಿ.ಟಿ., ನವದೆಹಲಿ ರವರ ಪತ್ರಗಳಲ್ಲಿ ಸ್ಥಳಾಂತರಗೊಂಡಿರುವ ಸಂಸ್ಥೆಗಳನ್ನು ಮರುಸಂಯೋಜನೆಗೊಳಿಸಲು ಮಾರ್ಗಸೂಚಿಗಳನ್ನು ನೀಡಿರುತ್ತಾರೆ.

ಆದರೆ ಉಲ್ಲೇಖ (4)ರಲ್ಲಿ ರಾಜ್ಯದ 04 ವಿಭಾಗಗಳ ಜಂಟಿ ನಿರ್ದೇಶಕರು(ತ) ರವರು ಸಲ್ಲಿಸಿರುವ ಪಟ್ಟಿಯಲ್ಲಿ ಖಾಸಗಿ ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಸ್ಥಳಾಂತರಗೊಂಡು ಮರುಸಂಯೋಜನೆಯನ್ನು ಇದುವರೆಗೂ ಪಡೆದಿರುವುದಿಲ್ಲ. ಡಿ.ಜಿ.ಟಿ., ನವದೆಹಲಿ ರವರ ಸಂಯೋಜನೆ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ.

ಸ್ಥಳಾಂತರಗೊಂಡಿರುವ ಸಂಸ್ಥೆಗಳು ಮರುಸಂಯೋಜನೆ ಪಡೆಯಲು Affiliation Norms-2018 ರಲ್ಲಿ ನಿಯಮ 3.5 ರ ಕಂಡಿಕೆ (i), (ii) & (iii) (ಪುಟ ಸಂಖ್ಯೆ: 38) ಈ ಕೆಳಕಂಡಂತೆ ಇರುತ್ತದೆ.

(i) If any existing institute relocates to new location without following latest NCVT Norms or without written prior approval of DGT / State Directorate, then institute shall be deaffiliated and not be allowed to reaffiliate for period of 03 years from date of deaffiliation.

(ii) While relocating the institute to new a location, institute shall ensure all trainees enrolled complete the training duration and no fresh admissions are admitted.

(iii) If any institute relocates without following NCVT Norms or prior written approval of the DGT/State Directorate, criminal proceedings may be initiated against the management of the Institute.

ಸದರಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ.

ಉಲ್ಲೇಖಿತ (1)ರ ಸುತ್ತೋಲೆಯಲ್ಲಿ ಸ್ಥಳಾಂತರಗೊಂಡಿರುವ ಅನುದಾನರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಆಡಳಿತ ಮಂಡಳಿಯವರಿಗೆ ಡಿ.ಜಿ.ಟಿ. ನವದೆಹಲಿ ರವರ ವೆಬ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿ ಕಡ್ಡಾಯವಾಗಿ ಮರು ಸಂಯೋಜನೆ ಪಡೆಯಲು ತಿಳಿಸಿದ್ದರೂ ಸಹ ಇದುವರೆಗೂ online ನಲ್ಲಿ ಅರ್ಜಿ ಸಲ್ಲಿಸಿ ಮರು ಸಂಯೋಜನೆ ಪಡೆದಿರುವುದಿಲ್ಲ ಮತ್ತು ಖಾಸಗಿ ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಇಲಾಖೆಯಿಂದ ಅನುಮತಿ ಪಡೆಯದೆ ಸ್ಥಳಾಂತರಗೊಂಡಿರುತ್ತವೆ.

ಆದ್ದರಿಂದ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಸ್ಥಳಾಂತರಗೊಂಡಿರುವ ಖಾಸಗಿ ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಸ್ಥಳಾಂತರಗೊಂಡು ಮರುಸಂಯೋಜನೆ ಪಡೆಯದೆ ನಿಯಮಗಳನ್ನು ಉಲ್ಲಂಘಿಸಿರುವುದರಿಂದ Affiliation Norms-2018 ರಲ್ಲಿನ 3.5 ರ ಕಂಡಿಕೆ (iii) ರಂತೆ ತಮ್ಮ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಮತ್ತು ಸ್ಥಳಾಂತರಗೊಂಡಿರುವ ಸಂಸ್ಥೆಗಳು ಡಿ.ಜಿ.ಟಿ. ನಿಯಮಾನುಸಾರ ಮೂಲಭೂತ ಸೌಕರ್ಯಗಳನ್ನು ಹೊಂದಿ ಮರು ಸಂಯೋಜನೆ ಪಡೆಯುವವರೆಗೆ ಆಗಸ್ಟ್-2020ನೇ ಸಾಲಿನಿಂದ ಅನ್ವಯಿಸುವಂತೆ ಸದರಿ ಸಂಸ್ಥೆಗಳಲ್ಲಿ ಅಭ್ಯರ್ಥಿಗಳ ಪ್ರವೇಶಾತಿ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿರುತ್ತದೆ. ಹಾಗೂ ನಿಯಮಾನುಸಾರ ಡಿ.ಜಿ.ಟಿ., ನವದೆಹಲಿ ರವರಿಗೆ ಸದರಿ ಸಂಸ್ಥೆಗಳ ಸಂಯೋಜನೆಯನ್ನು ರದ್ದುಪಡಿಸಲು ಸೂಕ್ತ ಕ್ರಮವಹಿಸಲಾಗುವುದು.

ಈ ಸಂಬಂಧ ತಮ್ಮ ಹೇಳಿಕೆಗಳೇನಾದರೂ ಇದ್ದಲ್ಲಿ ಸೂಕ್ತ ದಾಖಲೆಗಳನ್ನು 03 ದಿನಗಳೊಳಗಾಗಿ ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

ಅಡಕ: ಅನುಬಂಧ

ಆಯುಕ್ತರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.

ಇವರಿಗೆ,

ಅಧ್ಯಕ್ಷರು / ಕಾರ್ಯದರ್ಶಿಗಳು / ಪ್ರಾಚಾರ್ಯರು,
ಖಾಸಗಿ ಅನುದಾರಹಿತ ಕೈಗಾರಿಕಾ ತರಬೇತಿ ಸಂಸ್ಥೆ.
(ಸಂಸ್ಥೆಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಪ್ರತಿಯನ್ನು:

ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ ರವರಿಗೆ ಮಾಹಿತಿಗಾಗಿ ಹಾಗೂ ಸಂಬಂಧಿಸಿದ ಸಂಸ್ಥೆಗಳಿಗೆ ನೋಟೀಸನ್ನು ಖುದ್ದಾಗಿ ಜಾರಿಗೊಳಿಸಿ ವರದಿ ನೀಡಲು ಸೂಚಿಸಿದೆ.

# 2. ANNEXURE (SHIFTED PVT. ITIs)

| Sl No | Division | District | Name of the ITI with full address | Affiliated trades and units | If ITI is shifted, New address of the ITI | Whether ITI has got reaffiliation in the new address YES / NO | Remarks |
|---|---|---|---|---|---|---|---|
| | **HUBLI DIVISION** | | | | | | |
| 1 | BELAGAVI | BELAGAVI | Sri Sangameswara Industrial Training Institute Manihal Sureban, Rama Durga-591127 | COPA-1, Electrician-2, Fitter-2, Sewing Technolgoy-1, Mechanic Diesel-1 | Manihal Sureban, Ramadurga -591127 | No | Private |
| 2 | BELAGAVI | BELAGAVI | Sri Veer Bhadreshwar Industrial Training Centre, Katkol,Ramdurga-591114 | Electrician-2, Fitter-2, Sewing Technolgoy-1 | SERVEY NO; 872/A Katkol Ramdurga 591114 | No | Private |
| 3 | BELAGAVI | DHARWAD | Dr.Ambedkar Shikshan Sam ITI ITI Nekar Nagar,OLD-HUBLI, HUBLI-580024 | Sewing Technolgoy-1 | Nekar Nagar,OLD-HUBLI, HUBLI-580024 | No | Private |
| 4 | BELAGAVI | DHARWAD | Guru patil Industrial Training Institute Tarihal Road Gokul Hubli-580030 | Fitter-2 | Tarihal Road Gokul, Hubli-580030 | No | Private |
| 5 | BELAGAVI | DHARWAD | Sanmith ITI Vivekanandanagar, Gopalagowda Extn, Dharwad-580004 | Fitter-2 | DG Shetty Building, Lakkamanahalli, Dharwad- 591121 | No | Private |
| 6 | BELAGAVI | DHARWAD | ST. ANTHONY'S Industrail Training Institute (Vidyanagar, Hubli) 4TH CROSS, MAYUR NAGAR, ANAND NAGAR, OLD HUBLI, HUBLI-580031 | Fitter-2, Mechanic Diesel-1 | (Vidyanagar, Hubli) 4TH CROSS, MAYUR NAGAR, ANAND NAGAR, OLD HUBLI, HUBLI-580021 | No | Private |
| 7 | BELAGAVI | DHARWAD | Vishwa Sangama Education Society ITI Hubli-580024 | Electrician-2, Fitter-2 | Opp KEB Grid, Karwar road, Old Hubli Dist Dharwad-580024 | No | Private |
| 8 | BELAGAVI | GADAG | Gadag Rural ITI, Boomaraddi Buidling, Old DC Office, Gadag-582101 | Electrician-2 | Sri Kotra Basappa Veerappa Shigli Rural ITI, Gadag (Town)-582101 | No | Private |
| 9 | BELAGAVI | GADAG | Sri Gurupadeshwara Industrial Training Institute, Ron,Gadag 582209 | Electrician-4, Fitter-2 | Rajiv Gandhi Ayurvedic Medical College road, Ron Dist Gadag-582209 | No | Private |
| 10 | BELAGAVI | HAVERI | smves Karnataka Pvt ITI Ranebennur-581115 | Fitter-2 | Ranebennur-581115 | No | Private |
| 11 | BELAGAVI | HAVERI | Sri Banashankari Industrial Training Institute Mruthyunjaya Nagar 2nd Cross P.B Road Ranebennur-581115 | Electrician-4, Fitter-2 | Mruthyunjaya Nagar 2nd Cross P.B Road Ranebennur-581115 | No | Private |